ESI.A.No.31/2018

AW-1,

ದಿನಾಂಕಃ 26-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. ABN ವಕೀಲರಿಂದ

ನಮ್ಮ ಸಂಸ್ಥೆಯು 2014 ರಿಂದ ಇ ಎಸ್ ಐ ಕಾಯಿದೆ ವ್ಯಾಪ್ತಿಗೆ ಬಂದಿದೆ ಎಂದರೆ ನಿಜ. ಆಗಸ್ಟ್ 2016 ರಿಂದ ಡಿಸೆಂಬರ್ 2016 ರವರೆಗೆ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿರಲಿಲ್ಲ ಆದ್ದರಿಂದ ನೋಟೀಸ್ ಕೊಟ್ಟರು ಎಂದರೆ ಸಾಕ್ಷಿಯು ನಾನು ಪಾವತಿ ಮಾಡಿದ್ದೇನೆ ಎನ್ನುತ್ತಾರೆ. ಯಾವಾಗ ಪಾವತಿ ಮಾಡಿದ್ದೇನೆ ಮತ್ತು ಎಷ್ಟು ಪಾವತಿ ಮಾಡಿದ್ದೇನೆ ಎಂಬುದನ್ನು ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ನಾನು ಆ ಅವಧಿಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದರೆ ಸುಳ್ಳು. ನನಗೆ 18-1-2018 ಮತ್ತು 1-2-2018 ರಲ್ಲಿ ನೋಟೀಸುಗಳನ್ನು ಕೊಟ್ಟರು ಆದರೂ ನಾನು ಸುನಾವಣೆಯಾಗಿ ಹಾಜರಾಗಲಿಲ್ಲ ಎಂದರೆ ಸಾಕ್ಷಿಯು ನನಗೆ ಯಾವುದೇ ನೋಟೀಸು ಬಂದಿರಲಿಲ್ಲ ಎಂದು ನುಡಿಯುತ್ತಾರೆ. ಆನಂತರ 2-2-2018 ರಂದು ರೂ.6,08,644-00 ಗಳನ್ನು ಪಾವತಿಸಬೇಕೆಂದು ಎದುರುದಾರರು ಆದೇಶ ಮಾಡಿದರು ಎಂದರೆ ಸಾಕ್ಷಿಯು ಅದು ನನಗೆ ತಿಳಿದಿಲ್ಲ ಎನ್ನುತ್ತಾರೆ. ಸದರಿ ಆದೇಶದ ಮೇಲೆ ಇ ಎಸ್ ಐ ಕಾರ್ಪೋರೇಶನ್ ಮುಂದೆ ನಾನು ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ಪ್ರಕರಣದಲ್ಲಿ ಏನೆಲ್ಲಾ ನಡವಳಿಕೆಗಳು ನಡೆದಿವೆ ಎಂದು ನನಗೆ ಮಾಹಿತಿ ಇಲ್ಲ. 45 ಎಎ ಪ್ರಕಾರ ಸಲ್ಲಿಸಿದ ಮೇಲ್ಮನವಿಯಲ್ಲಿ ಏನು ಆದೇಶ ಆಯಿತು ಎಂದು ನನಗೆ ಮಾಹಿತಿ ಇಲ್ಲ. ನಾನು ಸಲ್ಲಿಸಿದ ಮೇಲ್ಮನವಿಯಲ್ಲಿ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಆದೇಶ ಮಾಡಿದ್ದಾರೆ ಆದ್ದರಿಂದ ಈ ನ್ಯಾಯಾಲಯದ ಮುಂದೆ ಸಲ್ಲಿ ಸಿರುವ ಈ ಅರ್ಜಿಯು ಪರಿಗಣನೆಗೆ ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಈ ಕೇಸಿಗೋಸ್ಕರ ಸೃಷ್ಟಿಸಿದ ದಾಖಲೆಗಳು ಎಂದರೆ ಸರಿಯಲ್ಲ. ಆದ್ದರಿಂದ ಈ ಅರ್ಜಿ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ, ಮೈಸೂರು.
ಮೈಸೂರು.